ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು, ಹೊಸ ತಾಲ್ಲೂಕುಗಳನ್ನು ರಚಿಸುವ ಬದಲು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ವಿಷೇಷ ತಹಸೀಲ್ದಾರ್ ನೇಮಕಾತಿ ಮಾಡಲು ತೀರ್ಮಾನ ತೆಗೆದುಕೊಂಡಿದೆ. ಹೀಗಾಗಿ, ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಿರುವುದಿಲ್ಲ.

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) (ಅ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಕೊಪ್ಪಳ ಜಿಲ್ಲೆಯ ಈ ಸರಫೇಸಿಂಗ್ ಜಿಲ್ಲಾ ಹೆದ್ದಾರಿ

1944 (2431) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲಾ ಪ್ಯಾಕೇಜ್ ರಾಜ್ಯ ಹೆದ್ದಾರಿ ಕೊಪ್ಪಳ ಜಿಲ್ಲೆಯ ರೀ-ಸರಫೇಸಿಂಗ್ ಜಿಲ್ಲಾ ಹೆದ್ದಾರಿಯಲ್ಲಿ ಸೇರಿಸಲಾಗಿದೆಯೇ; ಇಲ್ಲವಾದರಲ್ಲಿ ಸೇರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು; ಯೋಜನೆ ಕೈಬಿಟ್ಟದ್ದಕ್ಕೆ ಯಾರು ಜವಾಬ್ದಾರರು;

ಆ) ರಾಷ್ಟ್ರೀಯ ಹೆದ್ದಾರಿ 63 ಅಂಕು ಗುತ್ತಿ ರಾಷ್ಟ್ರೀಯ ಹೆದ್ದಾರಿ ಕೊಪ್ಪಳ ನಗರದ ಹೊರ ಮಾರ್ಗ ನಿರ್ಮಿಸುವುದು ಸರ್ಕಾರದ ಗಮನದಲ್ಲಿ ಇದೆಯೇ;

ಇ) ಹಾಗಿದ್ದಲ್ಲಿ, ಪ್ರಸ್ತಾವನೆಯಲ್ಲಿ ನಗರದ ಎಡಬದಿ ಮತ್ತು ಬಲಬದಿಯನ್ನು ಸೇರಿಸಲಾಗಿದೆಯೆ; ಸದರಿ ಪ್ರಸ್ತಾವನೆಯು ಸದ್ಯ ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೆ.ಆರ್.ಡಿ.ಸಿ.ಎಲ್ ವತಿಯಿಂದ ತೆಗೆದುಕೊಂಡ ರಾಜ್ಯ ಹೆದ್ದಾರಿಯ ನಿರ್ವಕಿಣೆಯ ಪ್ಯಾಕೇಜ್ ಅಡಿಯಲ್ಲಿ ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಮರು ಡಾಂಬರೀಕರಣ ಸೇರಿರುವುದಿಲ್ಲ. ಹೆದ್ದಾರಿಯ ನಿರ್ವಹಣೆಯ ಕಾರ್ಯದ ಅಂದಾಜು ಪಟ್ಟಿಯನ್ನು ತಯಾರಿಸುವಾಗ ಮರು ಡಾಂಬರೀಕರಣವನ್ನು ರಸ್ತೆಯ ಕೆಳಮಣ್ಣಿನ ಗುಣಮಟ್ಟ ಅಂದರೆ, ಸಿ.ಬಿ.ಆರ್.ನ ಪ್ರಮಾಣ ಶೇ.6 ಕ್ಕಿಂತ ಹೆಚ್ಚು ಇದ್ದ ರಸ್ತೆಯ ಭಾಗಗಳಿಗೆ ಮಾತ್ರ ಒದಗಿಸಲಾಗಿದೆ. ಸಿ.ಬಿ.ಆರ್ ಪ್ರಮಾಣ ಶೇ. 6 ಕ್ಕಿಂತ ಕಡಿಮೆ ಇರುವ ರಸ್ತೆಗಳನ್ನು ಬಲಪಡಿಸಬೇಕಾಗಿರುವುದರಿಂದ ಇದು ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಯಲ್ಲಿ ಸೇರಿರುವುದಿಲ್ಲ. ಈ ರಸ್ತೆಯನ್ನು ಬಲಪಡಿಸಿದಲ್ಲಿ ಮರು ಡಾಂಬರೀಕರಣ ಮಾಡುವುದನ್ನು ಇತರ ಯೋಜನೆಯಡಿ ತೆಗೆದುಕೊಳ್ಳಬಹುದು.

ಆ) ಹೌದು

ಇ) ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಅಂಕೋಲ-ಗೂಟಿ ರಸ್ತೆಯ ಕೊಪ್ಪಳ ನಗರದ ಹೊರ ಮಾರ್ಗ ನಿರ್ಮಿಸುವುದಕ್ಕಾಗಿ ನಗರದ ಎಡ ಬದಿಯಲ್ಲಿ ಎರಡು ಪ್ರಸ್ತಾವನೆಯನ್ನು ಅನುಮೋದನೆ ಕೋರಿ ಜೂನ್ 2002ರಲ್ಲಿ ಕೇಂದ್ರ ಭೂ ಸಾರಿಗೆ ಸಚಿವಾಲಯಕ್ಕೆ ಸಲ್ಲಿಸಲಾಗಿದೆ.

ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿರುವ ಕುಟುಂಬಗಳಿಗೆ ರಕ್ಷಣೆ

1945 (2182) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?